## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕನ್ನಡವನ್ನು ಆಡಳಿತ ಭಾಷೆಯಾಗಿ ಪ್ರಯೋಗದಲ್ಲಿ ತರುವಲ್ಲಿ ಕಂಡುಬರಬಹುದಾದ ನ್ಯೂನತೆಗಳನ್ನು ಪರೀಶೀಲಿಸಿ ಪರಿಹಾರ ಸೂಚಿಸುವ ಬಗ್ಗೆ ಸಮಿತಿಯ ರಚನೆ.

ಉಲ್ಲೇಖ :- ಸುತ್ತೋಲೆ ಕ್ರಮಾಂಕ; ಡಿಪಿ.ಎ.ಆರ್. 8 ಪಿ.ಒ.ಎಲ್.83, ದಿನಾಂಕ 10ನೇ ಫೆಬ್ರವರಿ 1983.

**ಪ್ರಸ್ತಾವನೆ :**

ಉಲ್ಲೇಖಿಸಿರುವ ಸುತ್ತೋಲೆಯಲ್ಲಿ ದಿನಾಂಕ 15ನೇ ಫೆಬ್ರವರಿ 83ರಿಂದ ಗ್ರಾಮಾಂತರ ಪ್ರದೇಶಗಳಿಂದ ಹಿಡಿದು ಸಚಿವಾಲಯದವರೆಗೆ ರಾಜ್ಯ ಸರ್ಕಾರದ ಎಲ್ಲಾ ಕಛೇರಿಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಕಟ್ಟುನಿಟ್ಟಾಗಿ ಅತ್ಯಂತ ಯಶಸ್ವಿ ಹಾಗೂ ಔಚಿತ್ಯಪೂರ್ಣವಾಗಿ ಜಾರಿಗೆ ತರಬೇಕೆಂದು ಆದೇಶ ನೀಡಲಾಗಿದೆ. ಸರಕಾರದ ಈ ನೀತಿಯನ್ನು ಜಾರಿಗೆ ತರುವ ಬಗ್ಗೆ ಕೆಲವು ಸಲಹೆಗಳನ್ನು ನೀಡಲಾಗಿದೆ. ಸರಕಾರದ ನೀತಿಯನ್ನು ಯಶಸ್ವಿಗೊಳಿಸಲು ವಿವಿಧ ಇಲಾಖೆಗಳು ಕೈಗೊಂಡ ಕ್ರಮಗಳ ಸಿಂಹಾವಲೋಕನ ಅಗತ್ಯವೆನಿಸಿದೆ.

**ಆದೇಶ ಕ್ರಮಾಂಕ ಡಿ.ಪಿ.ಎ.ಆರ್. 27 ಪಿ.ಒ.ಎಲ್. 1983**

ಬೆಂಗಳೂರು, ದಿನಾಂಕ 23ನೇ ಜೂನ್ 1983

ದಿನಾಂಕ 10ನೇ ಫೆಬ್ರವರಿ 1983ರ ಸುತ್ತೋಲೆಯಲ್ಲಿ ಆಜ್ಞೆಮಾಡಲಾದ ಸರಕಾರದ ನೀತಿಯನ್ನು ಕಾರ್ಯರೂಪಕ್ಕೆ ತರುವ ವಿಚಾರವನನ್ನು ಪರಿಶೀಲಿಸಲು ಈ ಕೆಳಕಂಡ ಸಮಿತಿಯನ್ನು ನೇಮಕ ಮಾಡಲು ಸರಕಾರವು ತೀರ್ಮಾನಿಸಿದೆ.

| | |
|---|---|
| 1. ಸಿದ್ದರಾಮಯ್ಯ, ಶಾಸಕರು | ಅಧ್ಯಕ್ಷರು |
| 2. ಕೋ. ಚನ್ನಬಸಪ್ಪ | ಸದಸ್ಯರು |
| 3. ಕೆ. ನಿಸ್ಸಾರ್ ಅಹಮದ್ | ಸದಸ್ಯರು |
| 4. ದೇವನೂರ ಮಹಾದೇವ | ಸದಸ್ಯರು |
| 5. ಪಾಟೀಲ ಪುಟ್ಟಪ್ಪ | ಸದಸ್ಯರು |

6. ವಿ. ರಘುರಾಮಶೆಟ್ಟಿ. ಸದಸ್ಯರು

7. ಖಾದ್ರಿ ಶಾಮಣ್ಣ ಸದಸ್ಯರು

8. ಕೆ. ವಿ. ಶಂಕರ ಗೌಡ ಸದಸ್ಯರು

9. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸದಸ್ಯರು

10. ಡಾ: ಚಿದಾನಂದಮೂರ್ತಿ, ಬೆಂಗಳೂರು ಸದಸ್ಯರು

11. ಚಂದ್ರಶೇಖರ ಪಾಟೀಲ್, ಧಾರವಾಡ ಸದಸ್ಯರು

12. ಜಯತೀರ್ಥ ರಾಜಪುರೋಹಿತ, ರಿಜಿಸ್ಟ್ರಾರ್, ಗುಲ್ಬರ್ಗ ವಿಶ್ವವಿದ್ಯಾಲಯ. ಸದಸ್ಯರು

13. ಅಪರ ಮುಖ್ಯ ಕಾರ್ಯದರ್ಶಿಗಳು ಸದಸ್ಯರು

14. ಕಾನೂನು ಇಲಾಖೆಯ ಕಾರ್ಯದರ್ಶಿಗಳು ಸದಸ್ಯರು

15. ವಿದ್ಯಾ ಇಲಾಖೆಯ ಕಾರ್ಯದರ್ಶಿಗಳು ಸದಸ್ಯರು

16. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸದಸ್ಯರು

17. ನಿರ್ದೇಶಕರು, ಭಾಷಾಂತರ ಇಲಾಖೆ ಸದಸ್ಯರು

18. ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ) ಸದಸ್ಯರು ಕಾರ್ಯದರ್ಶಿ

2. ಈ ಸಮಿತಿಯ ಕಾರ್ಯವ್ಯಾಪ್ತಿ ಈ ಕೆಳಗೆ ತೋರಿಸಿದಂತಿರುವುದು :-

(ಅ) ಸರಕಾರದ ರಾಜ್ಯಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪ್ರಯತ್ನಿಸಿರುವುವೇ ?

(ಆ) ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದಿರುವುದಿಲ್ಲವೇ ?

(ಇ) ಈ ನ್ಯೂನತೆಗಳಿಗೆ ಯಾರು ಅಥವಾ ಏನು ಕಾರಣವಾಗಿರುವುದು ?

(ಈ) ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು ?

(ಉ) ಸರಕಾರದ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ಅತ್ಯಂತ ತೃಪ್ತಿಕರವಾಗಿ ಕಾರ್ಯರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೇ ?

ಸಮಿತಿಯು ಮೇಲೆ ಸೂಚಿಸಿದ ವಿಷಯಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ ಅವುಗಳ ಬಗ್ಗೆ ಪರಿಹಾರವನ್ನು ಸೂಚಿಸಬೇಕು ಹಾಗೂ ಸುಧಾರಣೆಗೆ ಸಲಹೆಗಳನ್ನು ಮಾಡಬೇಕು.

3. ಸಮಿತಿಯ ಅಧಿಕಾರೇತರ ಸದಸ್ಯರಿಗೆ ಕರ್ನಾಟಕ ಸರಕಾರದ ನಾಗರಿಕ ಸೇವೆಗಳ ನಿಯಮಗಳು ಇದರ ಅನುಬಂಧ 'ಎ' ಯಲ್ಲಿರುವ ನಿಯಮಗಳಂತೆ ಪ್ರಯಾಣ ಭತ್ಯೆ, ದಿನಭತ್ಯೆಗಳನ್ನು ಕೊಡತಕ್ಕದ್ದು.

4. ಈ ಬಗ್ಗೆ ಉಂಟಾಗುವ ಖರ್ಚನ್ನು ''252 - ಸಚಿವಾಲಯ ಸಾಮಾನ್ಯ ಸೇವೆ - 1 ಸಚಿವಾಲಯ - 2 ಸಮಿತಿಗಳು ಮತ್ತು ಸಮ್ಮೇಳನಗಳು, ನ್ಯಾಯಾಧಿಕರಣಗಳು ಮೊದಲಾದವುಗಳಿಗೆ ಸಂಬಂಧಪಟ್ಟ ವೆಚ್ಚ (ಯೋಜನೇತರ)''ಕ್ಕೆ ಸೇರಿಸತಕ್ಕದ್ದು.

5. ಈ ಆದೇಶವನ್ನು ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಅನಧಿಕೃತ ಟಿಪ್ಪಣಿ ಕ್ರಮಾಂಕ ಎಫ್‌ಡಿ 1317 ವೆಚ್ಚ - 7/83 ದಿನಾಂಕ 9ನೇ ಜೂನ್ 1983, ಇದರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/-
(ಮುಖ್ಯ ಕಾರ್ಯದರ್ಶಿಗಳು).